01 DEC 2021

# ಕರ್ನಾಟಕ ಸರ್ಕಾರ ನಡವಳಿಗಳು

ವಿಷಯ:- ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ನಿಯಮಿತದಲ್ಲಿನ ಆಡಳಿತ ಅಧಿಕಾರಿ (ಗ್ರೂಪ್-ಎ ವೃಂದ) ಹುದ್ದೆಯನ್ನು ಪ್ರಧಾನ ವ್ಯವಸ್ಥಾಪಕರು (ಯೋಜನೆಗಳು) ಎಂದು ಪುನರ್ ನಾಮಕರಣ ಮಾಡುವ ಬಗ್ಗೆ.

ಓದಲಾಗಿದೆ:- 1. ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ನಿಯಮಿತದ ನಿರ್ದೇಶಕರ ಮಂಡಳಿಯ ದಿ:09.10.2019 ರಂದು ನಡೆದ 151ನೇ ಸಭೆಯ ನಡವಳಿಗಳು.

2. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು ಇವರ ಪತ್ರ ಸಂ:ಕಅಅನಿ/ಸಿಬ್ಬಂದಿ /ವೃನೇ /2021-22, ದಿ:29.11.2021.

*****

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ (1) ರಲ್ಲಿನ ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ನಿಯಮಿತದ ನಿರ್ದೇಶಕರ ಮಂಡಳಿಯ ದಿ:09.10.2019 ರಂದು ನಡೆದ 151ನೇ ಸಭೆಯ ವಿಷಯ ಸಂ:3 ರಲ್ಲಿ ನಿಗಮಕ್ಕೆ ಮಂಜೂರಾಗಿರುವ ಆಡಳಿತ ಅಧಿಕಾರಿ (ಗ್ರೂಪ್-ಎ ವೃಂದ) ಹುದ್ದೆಯನ್ನು ಪ್ರಧಾನ ವ್ಯವಸ್ಥಾಪಕರು (ಯೋಜನೆಗಳು) ಎಂದು ಪುನರ್ ನಾಮಕರಣ ಮಾಡುವುದರಿಂದ ಯಾವುದೇ ಹೆಚ್ಚಿನ ಹಣಕಾಸಿನ ಅಗತ್ಯ ಅಥವಾ ಗ್ರೇಡನ್ನು ಬದಲಾಯಿಸುವ ಅಗತ್ಯವಿಲ್ಲವಾದ್ದರಿಂದ ಆಡಳಿತ ಅಧಿಕಾರಿ (ಗ್ರೂಪ್-ಎ ವೃಂದ) ಹುದ್ದೆಯನ್ನು ಹುದ್ದೆಯನ್ನು ಪ್ರಧಾನ ವ್ಯವಸ್ಥಾಪಕರು (ಯೋಜನೆಗಳು) ಎಂದು ಪುನರ್ ನಾಮಕರಣ ಮಾಡಲು ನಿಗಮದ ನಿರ್ದೇಶಕರ ಮಂಡಳಿಯು ಸರ್ವಾನುಮತದಿಂದ ತೀರ್ಮಾನಿಸಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2) ರಲ್ಲಿನ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ನಿಯಮಿತ ಇವರು ನಿಗಮದ ನಿರ್ದೇಶಕರ ಮಂಡಳಿಯು ದಿ:09.10.2019 ರಂದು ನಡೆದ 151ನೇ ಸಭೆಯಲ್ಲಿ ಕೈಗೊಂಡ ನಿರ್ಣಯದಂತೆ ಆಡಳಿತ ಅಧಿಕಾರಿ (ಗ್ರೂಪ್-ಎ ವೃಂದ) ಹುದ್ದೆಯನ್ನು ಪ್ರಧಾನ ವ್ಯವಸ್ಥಾಪಕರು (ಯೋಜನೆಗಳು) ಎಂದು ಪುನರ್ ನಾಮಕರಣ ಮಾಡಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಪ್ರಸ್ತಾವನೆಯನ್ನು ಸರ್ಕಾರವು ಪರಿಶೀಲಿಸಿದೆ. ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ನಿಯಮಿತಕ್ಕೆ ಪ್ರಸ್ತುತ ಜಾರಿಯಲ್ಲಿರುವ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಆಡಳಿತ ಅಧಿಕಾರಿ (ಗ್ರೂಪ್-ಎ ವೃಂದ) ಹುದ್ದೆ ಮಂಜೂರಾಗಿರುತ್ತದೆ. ನಿಗಮದ ನಿರ್ದೇಶಕ ಮಂಡಳಿಯು ದಿ:09.10.2019 ರಂದು ನಡೆದ ಸಭೆಯಲ್ಲಿ ಕೈಗೊಂಡ ನಿರ್ಣಯದಂತೆ ಆಡಳಿತ ಅಧಿಕಾರಿ (ಗ್ರೂಪ್-ಎ ವೃಂದ) ಈ ಹುದ್ದೆಯನ್ನು ಅದೇ ವೇತನ ಶ್ರೇಣಿಯ ಅದೇ ವೃಂದದ ಪ್ರಧಾನ ವ್ಯವಸ್ಥಾಪಕರು (ಯೋಜನೆಗಳು) ಎಂದು ಪುನರ್ ನಾಮಕರಣ ಮಾಡಿದ್ದಲ್ಲಿ ಯಾವುದೇ ಹೆಚ್ಚಿನ ಹಣಕಾಸಿನ ಅಗತ್ಯ ಅಥವಾ ಗ್ರೇಡನ್ನು ಬದಲಾಯಿಸುವ ಅಗತ್ಯ ಇರುವುದಿಲ್ಲ. ಆದ್ದರಿಂದ ನಿಗಮದ ಆಡಳಿತ ಅಧಿಕಾರಿ

(ಗ್ರೂಪ್-ಎ ವೃಂದ) ಹುದ್ದೆಯನ್ನು ಪ್ರಧಾನ ವ್ಯವಸ್ಥಾಪಕರು (ಯೋಜನೆಗಳು) ಎಂದು ಪುನರ್ ನಾಮಕರಣ ಮಾಡಲು ಸರ್ಕಾರವು ನಿರ್ಧರಿಸಿದೆ. ಅದರಂತೆ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂ:ಎಂಡಬ್ಲ್ಯೂ ಡಿ 208 ಎಂಡಿಎಸ್ 2021, ಬೆಂಗಳೂರು ದಿ: 30.11.2021 .**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ನಿಯಮಿತದಲ್ಲಿನ ಆಡಳಿತ ಅಧಿಕಾರಿ (ಗ್ರೂಪ್-ಎ ವೃಂದ) ಈ ಹುದ್ದೆಯನ್ನು ಈ ಕೂಡಲೇ ಜಾರಿಗೆ ಬರುವಂತೆ ಅದೇ ವೇತನ ಶ್ರೇಣಿಯ ಅದೇ ವೃಂದದ "ಪ್ರಧಾನ ವ್ಯವಸ್ಥಾಪಕರು" (ಯೋಜನೆಗಳು) ಎಂದು ಪುನರ್ ನಾಮಕರಣ ಮಾಡಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಮಹಿಬೂಬ ಸಾಬ)
ಸರ್ಕಾರದ ಉಪ ಕಾರ್ಯದರ್ಶಿ,
ಅಲ್ಪಸಂಖ್ಯಾತರ ಕಲ್ಯಾಣ ಹಜ್ ಮತ್ತು ವಕ್ಫ್ ಇಲಾಖೆ.

ಗೆ,

1. ಮಹಾಲೇಖಪಾಲಕರು, ಕರ್ನಾಟಕ, ಬೆಂಗಳೂರು.
2. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ, ವಿ.ವಿ.ಗೋಪುರ, ಬೆಂಗಳೂರು.
3. ಸರ್ಕಾರದ ಕಾರ್ಯದರ್ಶಿಯವರು, ಆಪ್ತ ಕಾರ್ಯದರ್ಶಿ, ಅಲ್ಪಸಂಖ್ಯಾತರ ಕಲ್ಯಾಣ ಹಜ್ ಮತ್ತು ವಕ್ಫ್ ಇಲಾಖೆ.
4. ಸಮನ್ವಯಾಧಿಕಾರಿ, ಸಹಾಯವಾಣಿ ಕೇಂದ್ರ, ವಸಂತ ನಗರ, ಬೆಂಗಳೂರು.
5. ಹೆಚ್ಚುವರಿ ಪ್ರತಿ.